ಓ.ಎಸ್. ನಂಬರಃ 44/2023

ಪಿ. ಡಬ್ಲ್ಯೂಃ 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 02-07-2025)

**ಪಾಟೀ ಸವಾಲು : 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ಈ ದಾವೆಯನ್ನು 3ನೇ ಪ್ರತಿವಾದಿಯವರು 2ನೇ ಪ್ರತಿವಾದಿಯವರ ದಾವಾ ಆಸ್ತಿಯಲ್ಲಿನ ಹಕ್ಕು ಮತ್ತು ನನ್ನ ತಾಯಿಗೆ ಇರುವ ದಾವಾ ಆಸ್ತಿಯ ಹಕ್ಕನ್ನು ಮೋಸದಿಂದ 3ನೇ ಪ್ರತಿವಾದಿಯವರ ಹೆಸರಿಗೆ ಮಾಡಿಕೊಂಡಿದ್ದು, ಸದ್ರಿ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸರಿಯಾಗಿ 4 ಪಾಲು ಬೇಕು ಎಂದು ಹಾಕಿರುತ್ತೇವೆ. 2ನೇ ಪ್ರತಿವಾದಿ ಮತ್ತು ನನ್ನ ತಾಯಿ 3ನೇ ಪ್ರತಿವಾದಿಗೆ ಯಾವ ಸ್ವರೂಪದ ದಾಖಲಾತಿ ಬರೆದುಕೊಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2ನೇ ಪ್ರತಿವಾದಿ ಮತ್ತು ನನ್ನ ತಾಯಿ 3ನೇ ಪ್ರತಿವಾದಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಆದರೇ ಅದು ಯಾವ ದಸ್ತಾವೇಜು ಎಂದು ನನಗೆ ಹೇಳಲಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆ ದಾಖಲಿಸುವ ಸಂದರ್ಭದಲ್ಲಿ ಸದರಿ ದಾಖಲೆಯನ್ನು ತೆಗೆದು ನೋಡಿರುತ್ತೇವೆ.ಸಾಕ್ಷಿ ಮುಂದುವರಿದು 3ನೇ ಪ್ರತಿವಾದಿ ತೊಂದರೆ  ಕೊಡುತ್ತಿದ್ದರಿಂದ ದಾಖಲೆ ತೆಗೆದು ನೋಡಿರುತ್ತೇವೆ ಎಂದು ಹೇಳಿರುತ್ತಾರೆ. ಸಾಕ್ಷಿಗೆ ನಿಪಿ.21 ದಾಖಲೆಯನ್ನು ತೋರಿಸಿ ನೀವು ನೋಡಿದ ದಾಖಲೆ ಇದೇಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೌದು ನನಗೆ ಓದಲು ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಾಖಲೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನನ್ನ ವಕೀಲರಿಂದ ಸದರಿ ದಾಖಲೆಯನ್ನು ಓದಿಸಿ ಅದರಲ್ಲಿರುವ ವಿಷಯವನ್ನು ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಓದಿಸಿದಾಗ ನನ್ನ ವಕೀಲರು 3ನೇ ಪ್ರತಿವಾದಿಗೆ 2ನೇ ಪ್ರತಿವಾದಿ ಮತ್ತು ನನ್ನ ತಾಯಿ ದಾವಾ ಆಸ್ತಿಯಲ್ಲಿನ ಹಕ್ಕನ್ನು ಬಿಡುಗಡೆ ಮಾಡಿ ಕೊಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಆದರೇ ಅದು ಮೋಸದಿಂದ ಆಗಿರುತ್ತದೆ. ನಿಪಿ.21 ರ ಪುಟ ಸಂಖ್ಯೆ 4 ರಲ್ಲಿ ನನ್ನ ತಾಯಿ ಮತ್ತು 2ನೇ ಪ್ರತಿವಾದಿಯವರ ಪೋಟೋ ಇರುತ್ತದೆ ಎಂದರೆ ಸರಿ. ನಿಪಿ.21 ನ್ನು ಭಟ್ಕಳದ ಉಪನೊಂದಣಾಧಿಕಾರಿಯವ ಕಛೇರಿಯಲ್ಲಿ ನನ್ನ ತಾಯಿ ಮತ್ತು 2ನೇ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿನ ಅವರ ಹಕ್ಕನ್ನು ಬಿಡುಗಡೆ ಮಾಡಿ ಹಕ್ಕು ಬಿಡುಗಡೆ ಪತ್ರವನ್ನು ನೊಂದಾಯಿಸಿ ಕೊಟಿದ್ದಾರೆ ಎಂದರೆ ಸಾಕ್ಷಿಯು ಅದನ್ನು ಸುಳ್ಳಾಗಿ ಮಾಡಿಕೊಂಡಿದ್ದಾರೆ ಎಂದು ಉತ್ತರಿಸಿರುತ್ತಾರೆ. ಈ ದಿನ 2 ಮತ್ತು 3ನೇ ಪ್ರತಿವಾದಿಗಳು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ ಎಂದರೆ ಹೌದು. 2ನೇ ಪ್ರತಿವಾದಿಯ ಬಳಿ 3ನೇ ಪ್ರತಿವಾದಿಗೆ ದಾವಾ ಆಸ್ತಿಯ ಹಕ್ಕನ್ನು ಬಿಡುಗಡೆ ಮಾಡಿಕೊಟ್ಟಿದಿಯಾ ಎಂದು ಕೇಳಿರುತ್ತೇನೆ . ಆಗ 2ನೇ ಪ್ರತಿವಾದಿಯವರು ಏನು ಹೇಳಿರುವುದಿಲ್ಲ.

2. ನನ್ನ ತಾಯಿಯವರಿಗೆ ವ್ಯವಹಾರಿಕ  ಜ್ಞಾನ ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿಗೆ ಏನು ಗೊತ್ತಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿಗೆ ಅಂಚೆ ಕಛೇರಿಯಲ್ಲಿ ಹಣಕಾಸಿನ ವ್ಯವಹಾರ ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಾಯಿಗೆ ಸರ್ಕಾರದ ಯೋಜನೆಯಿಂದ ಹಣ ಬರುತ್ತದೆ ಎಂದು ಹೇಳಿರುತ್ತಾರೆ.ನನ್ನ ತಾಯಿಗೆ ಹೊನ್ನಾವರದ ಅರ್ಬನ್ ಬ್ಯಾಂಕ್ ನಲ್ಲಿ ಶೇರುದಾರರಾಗಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿಗೆ ಬೈಲೂರಿನ ವರದಾ ಗ್ರಾಮೀಣ ಬ್ಯಾಂಕಿನಲ್ಲಿ ಎಸ್.ಬಿ. ಖಾತೆ ಹೊಂದಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ PACL India Limited ನಲ್ಲಿ ಜೀವ ವಿಮೆ ಮಾಡಿಕೊಂಡಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ಹೊನ್ನಾವರ ಅರ್ಬನ್ ಬ್ಯಾಂಕಿನಲ್ಲಿ ನನ್ನ ತಾಯಿ ಆಸ್ತಿಯ ಮೇಲೆ ಸಾಲ ಮಾಡಿ ವ್ಯವಹಾರ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದೆಲ್ಲ ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ತಾಯಿಗೆ ಎಲ್ಲಾ ವ್ಯವಹಾರದ ಬಗ್ಗೆ ಮತ್ತು ದಾಖಲಾತಿಗಳ ಬಗ್ಗೆ ಜ್ಞಾನ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮತ್ತು ನನ್ನ ತಾಯಿ ಅವರ ಸ್ವಂತ ಇಚ್ಛೆಯಿಂದ ಮತ್ತು ಸ್ವಖುಷಿಯಿಂದ ನಿಪಿ.21 ಹಕ್ಕು ಬಿಡುಗಡೆ ಪತ್ರವನ್ನು 3ನೇ ಪ್ರತಿವಾದಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೋಸದಿಂದ ಮಾಡಿರುತ್ತಾರೆ.

3. ದಾವಾ ಆಸ್ತಿಯು ನನ್ನ ಗಂಡನ ಮನೆಯಿಂದ ಅಂದಾಜು 3 ಕಿ.ಮೀ ದೂರದಲ್ಲಿ ಇರುತ್ತದೆ. ಸರಿಯಾಗಿ ಗೊತ್ತಿಲ್ಲ. 3ನೇ ಪ್ರತಿವಾದಿಯವರ ಮನೆ ನನ್ನ ತಾಯಿಗೆ ಮನೆಯ ಹತ್ತಿರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಹತ್ತಿರದಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ತಾಯಿ ಒಬ್ಬರೇ ಕೃಷಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ಕೃಷಿ ಕೆಲಸ ಮಾಡುತ್ತಿದ್ದೇವು ಎಂದು ಉತ್ತರಿಸಿರುಸ್ತಾರೆ. ಆ ರೀತಿ ನನ್ನ ತಾಯಿ ಮರಣ ಹೊಂದುವವರೆಗೆ ನಮ್ಮ ಜೊತೆ ಕೃಷಿ ಕೆಲಸ ಮಾಡಿರುತ್ತಾರೆ. ನನ್ನ ತಾಯಿ ಮತ್ತು 2ನೇ ಪ್ರತಿವಾದಿಯ ದೆಖ-ರೆಖೆ ಗಳನ್ನು 3ನೇ ಪ್ರತಿವಾದಿಯವರೇ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ ನಾವೆಲ್ಲರೂ ನೋಡಿಕೊಳ್ಳುತ್ತಿದ್ದೇವು. ಪ್ರಸ್ತುತ 2ನೇ ಪ್ರತಿವಾದಿಯವರನ್ನು 3ನೇ ಪ್ರತಿವಾದಿಯವರೇ ನೋಡಿಕೊಳ್ಳುತಿದ್ದು ಅವರ ಜೊತೆಗೆ ಇರುತ್ತಾರೆ ಎಂದರೆ ಹೌದು. 2ನೇ ಪ್ರತಿವಾದಿ ಅವಿವಾಹಿತಳು ಎಂದರೆ ಸರಿ.

4. ದಾವಾ ಆಸ್ತಿಯ ಮೌಲ್ಯ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಮತ್ತು ನನ್ನ ತಾಯಿ 3ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿನ ಹಕ್ಕು ಬಿಡುಗಡೆ ಮಾಡಿಕೊಟ್ಟಿದ್ದರಿಂದ 3ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಹೆಚ್ಚಿನ ಪಾಲು ಹೊಯಿತು ಎಂಬ ಮತ್ಸರದಿಂದ ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನನ್ನ ತಾಯಿಗೆ ಮತ್ತು 2ನೇ ಪ್ರತಿವಾದಿಗೆ ಮೋಸ ಮಾಡಿ ಹಕ್ಕು ಬಿಡುಗಡೆ ಪತ್ರ ಮಾಡಿದ್ದಾರೆ ಎಂದು ಪೊಲೀಸ್ ಠಾಣೆಗೆ ನಾನು , ನನ್ನ ತಾಯಿ ಮತ್ತು 2ನೇ ಪ್ರತಿವಾದಿ ದೂರನ್ನು ನೀಡಿರುವುದಿಲ್ಲ. ನಿಪಿ.21 ಹಕ್ಕು ಬಿಡುಗಡೆ ಪತ್ರದ ಬಗ್ಗೆ 2017ನೇ ಇಸವಿಯಲ್ಲಿ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಿಪಿ.21ರ ಪ್ರಕಾರ ದಾವಾ 'ಅ' ಪರಿಶಿಷ್ಟದ ಆಸ್ತಿಯಲ್ಲಿ 3ನೇ ಪ್ರತಿವಾದಿಗೆ 2ನೇ ಪ್ರತಿವಾದಿ ಮತ್ತು ನನ್ನ ತಾಯಿಯ ಹಕ್ಕು ಹೋಗುತ್ತದೆ ಎಂದರೆ ಸರಿಯಲ್ಲ. ನಾಲ್ಕು ಸಮಾನ ಭಾಗ ಆಗಬೇಕು. ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಕಾನೂನು ಭದ್ದವಾಗಿಯೇ ಸ್ವಖುಷಿಯಿಂದ ನಿಪಿ.21 ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ದಾವೆಯನ್ನು ನಾನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**